ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 4, Jan-Feb, 2023, Pp. 76-84.
©IIMRD, Mysuru
IIMRD JOURNALS
www.iimrd.com

# ಶ್ರೀ ಹಾಲಸಿದ್ಧನಾಥ ಪರಂಪರೆ ಮತ್ತು ನಿಪ್ಪಾಣಿ ಪರಿಸರ

**ಕುಮಾರ ಎಂ. ತಳವಾರ* & ಡಾ. ಪಿ. ನಾಗರಾಜ****

*ಸಂಶೋಧಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಮಾರ್ಗದರ್ಶಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.

***ಸಾರಾಂಶ:* (Abstract)**

'ಶೈವ ಸಂಪ್ರದಾಯದ ಸಂಯೋಜಿತ ರೂಪವೇ ನಾಥ ಪಂಥ' ಎಂದು ಹಿರಿಯ ವಿದ್ವಾಂಸರಾದ ಸೂರ್ಯನಾಥ ಕಾಮತ್ ಅವರು ಅಭಿಪ್ರಾಯ ಪಡುತ್ತಾರೆ. ಘೋರಖ್‌ನಾಥ ಮತ್ತು ಮಚ್ಚೇಂದ್ರನಾಥ ಎಂಬುವವರು ಈ ಪಂಥದ ಸ್ಥಾಪಕರು. ಇವರಲ್ಲಿ ನವನಾಥರೆಂಬ ಪರಂಪರೆ ಇದೆ. ನವನಾಥರೆಂದರೆ ಒಂಬತ್ತು ಜನ ನಾಥರೆಂಬ ಅರ್ಥ. ಈ ಪಂಥದ ಸ್ಥಾಪನೆ 10–11ನೇ ಶತಮಾನದ್ದೆಂದು ಊಹಿಸಲಾಗಿದೆ. ಈಶ್ವರ, ಭೈರವ, ದತ್ತಾತ್ರೇಯನನ್ನು ಇವರು ಮುಖ್ಯವಾಗಿ ಪೂಜಿಸುತ್ತಾರೆ. 'ಉತ್ತರ ಭಾರತದ ಗೋರಖಪುರ ಇದರ ಇಂದಿನ ಕೇಂದ್ರ. ಕರ್ನಾಟಕದಲ್ಲಿ ಈಗ ಇರುವ ನಾಥ ಪಂಥದ ಮಠಗಳಲ್ಲಿರುವ ಸಂನ್ಯಾಸಿ, 12 ವರ್ಷಗಳಿಗೊಮ್ಮೆ ಗೋರಖಪುರದಿಂದಲೆ ನೇಮಿಸಲ್ಪಡುತ್ತಾರೆ. ಈ ಸನ್ಯಾಸಿ ಕಾಲುನಡುಗೆಯಿಂದಲೇ ಗೋರಖಪುರದಿಂದ ತನ್ನ ನಿಯುಕ್ತಿ ಸ್ಥಾನಕ್ಕೆ ಬರುತ್ತಾನೆ. ಆತ ಒಂದು ದಿನದಲ್ಲಿ ನಡೆಯುವ ಅಂತರದಲ್ಲಿ ದಾರಿಯಲ್ಲಿ ನಾಥ ಪಂಥೀಯರ ಒಂದು ಮಠ ಅಥವಾ ಪೂಜಾ ಕೇಂದ್ರವಿದ್ದು, ಈ ಸಂನ್ಯಾಸಿ ಅಲ್ಲಿಯೇ ರಾತ್ರಿ ತಳವೂರುತ್ತಾನೆ. ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಊರಲ್ಲೂ ಇವರ ಮಠವಿದೆ. ಅಲ್ಲಿ ಒಬ್ಬ ಪ್ರತ್ಯೇಕ ಸ್ವಾಮಿ ಇದ್ದು ಕೆಲವೊಂದು ಬಾರಿ ಕದ್ರೆಯಲ್ಲಿನ ಸ್ವಾಮಿಗಳೇ ವಿಟ್ಲದ ಮಠದ ಉಸ್ತುವಾರಿ ನಡೆಸುತ್ತಾರೆ'1

***ಮುಖ್ಯಪದಗಳು:* (Keywords)** ನಾಥಪಂಥ, ಹಾಲಸಿದ್ಧನಾಥ, ನಿಪ್ಪಾಣಿ, ಗೋರಖಪುರ.

**ಪೀಠಿಕೆ**

'ಕರ್ನಾಟಕದ ಜನಸಮುದಾಯಗಳ ಸಾಮಾಜಿಕ, ಧಾರ್ಮಿಕ ಬದುಕಿನಲ್ಲಿ ಕಾಪಾಲಿಕ, ಕಾಳಾಮುಖ, ನಾಥ, ಶಾಕ್ತ, ಸೂಫೀ, ಬೌದ್ಧ, ಆರೂಢ, ಶರಣ ಮುಂತಾದ ದರ್ಶನ ಹಾಗೂ ಪಂಥಗಳ ಅಂಶಗಳು ಹಲವು ರೂಪಗಳಲ್ಲಿ ಅಡಗಿವೆ'[2] ಎನ್ನುವ ಅಭಿಪ್ರಾಯವನ್ನು ಹಿರಿಯ ಸಂಸ್ಕೃತಿ ಚಿಂತಕರಾದ ರಹಮತ್ ತರೀಕೆರೆ ಅವರು ಅವರ ಕೃತಿಯಾದ 'ಕರ್ನಾಟಕದ ನಾಥಪಂಥ'ದಲ್ಲಿ ವ್ಯಕ್ತಪಡಿಸುತ್ತಾರೆ.

ಕರ್ನಾಟಕದಲ್ಲಿ ಈ ಪಂಥದ ಪ್ರಭಾವ ಬಹಳಷ್ಟಿದ್ದು, 'ಕರ್ನಾಟಕದಲ್ಲಿಯೇ ಇರುವ ಆದಿ ಚುಂಚನಗಿರಿ ನಾಥ ಪಂಥೆಯರ ಒಂದು ಪ್ರಾಚೀನ ಪ್ರಸಿದ್ಧ ಕೇಂದ್ರ. ಅಲ್ಲಿ ಆರಾಧನೆಯಾಗುವುದು ಭೈರವ,

*Please cite this article as:* *ಕುಮಾರ ಎಂ. ತಳವಾರ & ಡಾ. ಪಿ. ನಾಗರಾಜ* (2023). ಶ್ರೀ ಹಾಲಸಿದ್ಧನಾಥ ಪರಂಪರೆ ಮತ್ತು ನಿಪ್ಪಾಣಿ ಪರಿಸರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು. ಸಂ. 76–84.*

ಈಗಲೂ ಅಲ್ಲಿ ವಿಶಾಲವಾದ, ಭವ್ಯ ಭೈರವನ ದೇವಾಲಯವಿದೆ. ಅಲ್ಲಿನ ಮಠದ ಸ್ವಾಮಿಗಳು ಇಂದು **'ನಾಥ'** ಎಂಬ ಹೆಸರು ಹೊಂದಿರುತ್ತಾರೆ. (ಉದಾ: ಗಂಗಾಧರನಾಥ, ಸಾಮ್ಯನಾಥ, ಇತ್ಯಾದಿ)'[3]

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ನಾಥಪಂಥಿಯರಿಂದಾಗಿ ದತ್ತ ಸಂಪ್ರದಾಯವು ಜನಪ್ರಿಯವಾಗಿದೆ. 'ಸವದತ್ತಿಯಲ್ಲಿ ಈಗಲೂ ಯಲ್ಲಮ್ಮ ದೇವಾಲಯದ ಎದುರು ನಾಥಪಂಥೀಯರ ಒಂದು ಮಠ ಇದೆ. ಈಗಲೂ ಅಲ್ಲಿ ನಾಥ ಸಂನ್ಯಾಸಿಗಳಿದ್ದಾರೆ. ಶಾಪಗ್ರಸ್ತ ರೇಣುಕೆಗೆ ವಿಮೋಚನೆ ನೀಡಿದವರು ಎಕ್ಕಯ್ಯ, ಜೋಗಯ್ಯ (ಏಕನಾಥ, ಜೋಗಿನಾಥ) ಎಂಬ ಸಂತರೆಂದು ಬಲವಾದ ಜಾನಪದ ಹಾಡುಗಳಿವೆ'[4]

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಭಾಗದ ಹಾಲುಮತ ಸಮುದಾಯದಲ್ಲಿ ನಾಥಪಂಥದ ಅನುಯಾಯಿಗಳಾಗಿರುವುದು ಕಂಡುಬರುತ್ತದೆ. ಈ ನಾಥ ಪಂಥದಲ್ಲಿ ಜಾತಿಭೇದ–ಭಾವವಿರಲಿಲ್ಲ. ಹಠಯೋಗ ಇವರ ಆರಾಧನೆಯ ಮೂಲವಿಧಾನ. ನವನಾಥರೆಲ್ಲ ಮಹಾಯೋಗ ಸಾಧಕರೆಂದು 'ನವನಾಥ ಸಾರ' ಎಂಬ ಗ್ರಂಥದಿಂದ ತಿಳಿಯುತ್ತದೆ.

18–19ನೆಯ ಶತಮಾನದಲ್ಲಿ ಆಗಿ ಹೋದ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲೂಕಿನ ಶ್ರೀಕ್ಷೇತ್ರ ಅಪ್ಪಾಚಿವಾಡಿ ಗ್ರಾಮದ ಹಾಲಸಿದ್ಧನಾಥ ಎಂಬ ಸಂತನನ್ನು ನವನಾಥರಲ್ಲಿ ಗೇಹಿಣಿನಾಥ ಮತ್ತು ರೇವಣನಾಥನ ಅವತಾರವೆಂದು ಕರೆಯಲಾಗಿದೆ. ನಾಥ ಪಂಥಿಯರು ಎಲ್ಲೆ ಹೋದರೂ ಅವರು ತಮ್ಮ ಯಾವುದಾದರೂ ಒಂದು ಕುರುಹು, ಗುರುತನ್ನು ಬಿಟ್ಟು ಹೋಗುತ್ತಾರೆ ಎನ್ನುವ ಮಾತಿದೆ. ಅದರಂತೆ ನಿಪ್ಪಾಣಿ ಪರಿಸರದಲ್ಲಿ ಆಗಿ ಹೋಗಿರುವ ಹಾಲಸಿದ್ಧನಾಥರು ಸಂಚರಿಸಿದ ಸ್ಥಳಗಳಲ್ಲೆಲ್ಲಾ ಅವರ ಅನೇಕ ಕುರುಹುಗಳು, ಐತಿಹ್ಯಗಳು ಲಭ್ಯವಾಗುತ್ತವೆ.

**ಶ್ರೀ ಹಾಲಸಿದ್ಧನಾಥರ ಇತಿಹಾಸ**

ಶ್ರೀ ಹಾಲಸಿದ್ಧನಾಥರನ್ನು ನವನಾಥರಲ್ಲಿ ಗಹಿಣೀನಾಥ ಅಥವಾ ರೇವಣನಾಥರ ಅವತಾರವೆಂದು ಪರಿಗಣಿಸಲಾಗಿದೆ. ನಾಥರು ಸಮಾಧಿ ಸ್ವೀಕರಿಸಲು ಸ್ಥಳವನ್ನು ಹುಡುಕುತ್ತಾ ನಿಪ್ಪಾಣಿಗೆ ಬಂದು ತಲುಪಿದರು. ಆ ಸಮಯದಲ್ಲಿ ಆಪ್ಪಾಸಾಹೇಬ್ ನಿಪ್ಪಾಣಿಕರ್–ದೇಸಾಯಿಯವರು ನಿಪ್ಪಾಣಿಯ ರಾಜರಾಗಿದ್ದರು. ನಿಪ್ಪಾಣಿಕರ್‌ರ ವಾಡೆಯಲ್ಲಿ ದನಕಾಯುವ ಕೆಲಸವನ್ನು ಮಾಡುತ್ತಿದ್ದರು. ಇತರ ಸೇವಕರಂತೆ, ನಾಥರಿಗೂ ಹಳಸಿದ ಆಹಾರವನ್ನು ನೀಡಲಾಗುತ್ತಿತ್ತು. ನಾಥರು ಅದನ್ನು ಹಸುಗಳಿಗೆ ತಿನ್ನಿಸಿ ಸ್ವತಃ ಉಪವಾಸ ಮಾಡುತ್ತಿದ್ದರು. ಆದ್ದರಿಂದ ಬಂಜೆಯಾದ ಗೋವೊಂದು ನಾಥರಿಗೆ ಕುಡಿಯಲು ಹಾಲು ನೀಡಲು ಪ್ರಾರಂಭಿಸಿತು. ಪ್ರತಿದಿನ ಈ ಪವಾಡ ಸಂಭವಿಸುತ್ತಿತ್ತು; ಆದರೆ ಅದೇ ವಾಡೆಯಲ್ಲಿ ಕೆಲಸಕ್ಕಿದ್ದ ಒಬ್ಬ ವ್ಯಕ್ತಿ ಮಾತ್ರ ಸಹಿಸಲಾರದೆ ಕುತಂತ್ರ ಮಾಡಿದ. 'ನಿಪ್ಪಾಣಿಕರ್‌ರ ಸೇವಕನು ಗೋವಿನ ಹಾಲು ಕದ್ದು ಕುಡಿಯುತ್ತಿದ್ದಾನೆಂದು' ಸರಕಾರ್‌ಗೆ ಚಾಡಿ ಹೇಳಿದ. ನಿಪ್ಪಾಣಿಕರ್‌ರಿಗೆ ವಿಷಯ ತಿಳಿದ ತಕ್ಷಣ ಅವರು ಹಿಂದೆಮುಂದೆ ಯೋಚಿಸದೆ ನಾಥರಿಗೆ ಎಕ್ಕದ ಗಿಡದ ಹಾಲನ್ನು ಕುಡಿಯುವ ಶಿಕ್ಷೆ ವಿಧಿಸಿದರು. ನಾಥರು ಅದನ್ನು ಕೈಗೆತ್ತಿಕೊಂಡಾಗ, ಅದೂ ಹಾಲಾಯಿತು. ಆದರೆ ಆ ಹಾಲು ಕುಡಿದಾದ ನಂತರ, ನಾಥರು 'ನಿಮ್ಮ ಏಳು ತಲೆಮಾರುಗಳು ನಿರ್ವಂಶವಾಗಲಿ…' ಎಂದು ನಿಪ್ಪಾಣಿಕರ್ ಕುಟುಂಬಕ್ಕೆ ಶಾಪವಿತ್ತು ಅಲ್ಲಿಂದ ನಾಥರು ಹೊರಟುಹೋಗುತ್ತಾರೆ. ಆನಂತರದಲ್ಲಿ ನಿಪ್ಪಾಣಿಕರ್ ಸರಕಾರ್‌ಗೆ ತಮ್ಮ ತಪ್ಪಿನ ಅರಿವಾಗಿ ನಾಥರಿಗೆ ಶರಣಾಗಿ ತಮ್ಮ ಉಳಿದ ಜೀವನವನ್ನು ನಾಥರ ಸೇವಯಲ್ಲಿ ಕಳೆದರು ಎಂಬ ಪ್ರತೀತಿ ಇದೆ.

**ಶ್ರೀ ಹಾಲಸಿದ್ಧನಾಥರು ಮತ್ತು ಪವಾಡಗಳು**

ಎಕ್ಕದ ಗಿಡದ ಹಾಲನ್ನು ಕೂಡ ಹಾಲಿನಂತೆ ಕುಡಿದು ಅದು ಹಾಲು ಎಂದು ಸಾಬೀತುಪಡಿಸಿದ ನಂತರ ಜನರು ನಾಥರನ್ನು 'ಹಾಲಸಿದ್ಧನಾಥ' ಎಂಬ ಹೆಸರಿನಿಂದ ಕರೆಯಲಾರಂಭಿಸಿದರು. ನಂತರ ವೇದಗಂಗೆಯ ತೀರಕ್ಕೆ ಬಂದು ತಲುಪಿದ ನಾಥರು ನಾವಿಕನಿಗೆ ನದಿ ದಾಟಿಸಲು ಕೇಳಿಕೊಂಡರು. ಆದರೆ ಅವನು ಕೇಳಲಿಲ್ಲ. ಅವನ ದುರಹಂಕಾರಕ್ಕಾಗಿ ಅವನನ್ನು ಶಪಿಸಿದ ನಾಥರು ನೀರಿನ ಮೇಲೆ ತಮ್ಮ ಕಂಬಳಿ ಹಾಸಿ, ಅದರ ಮೇಲೆ ಭಂಡಾರವನ್ನು ಹಾಕಿ, ಅದೇ ಕಂಬಳಿಯ ಮೇಲಿಂದ ವೇದಗಂಗೆಯನ್ನು ದಾಟಿ ಕುರ್ಲಿ ಗ್ರಾಮವನ್ನು ಪ್ರವೇಶಿಸಿದರು.

ಹಾಲಸಿದ್ಧನಾಥರಿಗೆ ಸಂಬಂಧಿಸಿದಂತೆ 1) ಐರಣಿ– (ಮೊಂಗಲಾಯಿ), 2) ಕಂಕಣವಾಡಿ (ರಾಯಭಾಗ ತಾಲೂಕು), 3) ನಣದಿ (ಚಿಕ್ಕೋಡಿ), 4) ಘೋಸರವಾಡ– (ತಾ; ಶಿರೋಳ್, ಮಹಾರಾಷ್ಟ್ರ), 5) ಕಾರಿಕೊಳ್ಳ ಅಥವಾ ಸಿದ್ಧಾಪುರಹಟ್ಟಿ (ತಿಕೋಟೆ), (6) ಅಪ್ಪಾಚಿವಾಡಿ (ಚಿಕ್ಕೋಡಿ) ಇವು ಆರು ಪ್ರಮುಖ ಪ್ರಸಿದ್ಧ ಸ್ಥಳಗಳಾಗಿವೆ. ಇವುಗಳಲ್ಲಿ ಮಹಾರಾಷ್ಟ್ರದ ಶಿರೋಳ ತಾಲೂಕಿನ ಘೋಸರವಾಡ ಮತ್ತು ಕರ್ನಾಟಕದ ನಿಪ್ಪಾಣಿ ತಾಲೂಕಿನ ಅಪ್ಪಾಚಿವಾಡಿ ಇವೆರಡೂ ಹಾಲಸಿದ್ಧನಾಥನ ಪ್ರಮುಖ ಪ್ರಸಿದ್ಧ ಶ್ರೀಕ್ಷೇತ್ರಗಳಾಗಿವೆ. ಹಾಲಸಿದ್ಧನಾಥರು ಸಮಾಧಿ ಸ್ವೀಕರಿಸಿದ ನಂತರ ಅಳುತ್ತಾ ಬೋರಿಡುತ್ತಿದ್ದ, ನಿಪ್ಪಾಣಿಕರ್ ಸರಕಾರ್ ಹಾಗೂ ತನ್ನ ತಪ್ಪಿನ ಅರಿವಾಗಿ ತನ್ನ ಮನೆಗೆ ಕರೆದೊಯ್ದು ಅಂಬಲಿ ಪ್ರಸಾದವನ್ನು ನೀಡಿದ್ದ ಅಂಬಿಗ ಇವರಿಬ್ಬರ ಮನೆಗಳಿಗೂ 'ವರ್ಷಕ್ಕೊಮ್ಮೆ ದಸರೆಯ ಜಾಗರಣೆಯ ದಿವಸ ಮಧ್ಯಾಹ್ನ 12 ಗಂಟೆಗೆ ನಿಪ್ಪಾಣಿ ವಾಡೆಗೆ ಮತ್ತು ರಾತ್ರಿ 12 ಗಂಟೆಗೆ ಅಂಬಿಗರ ಮನೆಗೆ ಹಾಲಸಿದ್ಧನಾಥರಡೊಳ್ಳು ಮತ್ತು ಪಲ್ಲಕ್ಕಿಯು ಹೋಗುತ್ತದೆ'[5] ನಾಥರ ಪವಿತ್ರ ದಿನವಾದ ಗುರುವಾರ, ಭಾನುವಾರ ಅಮವಾಸ್ಯೆ, ದಸರಾ ಸಂದರ್ಭದಲ್ಲಿ ಭಕ್ತರು ನಾಥರನ್ನು ನೋಡಲು ವಿಶೇಷವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ. ನಾಥರಿಗೆ ತಲೆಬಾಗಿ ಶರಣಾದವನಿಗೆ ಸತ್ವ ಸಿಗುತ್ತದೆ ಎಂಬುದು ಭಕ್ತರ ನಂಬಿಕೆ, ಇಲ್ಲಿ ಕೇಳುವ ಅಗತ್ಯವಿಲ್ಲ. 'ಚೈತ್ರ ಪೂರ್ಣಿಮೆಯಂದು ಒಂದು ದಿನ, ಯುಗಾದಿಗೆ ಎರಡು ದಿನ ಮತ್ತು ಅಶ್ವಿನ್ ಶೀಗೆ ಹುಣ್ಣಿಮೆಯಂದು ಐದು ದಿನಗಳ ದೊಡ್ಡ ಜಾತ್ರೆ, ಈ ಕ್ಷೇತ್ರವು ಎಲ್ಲಾ ಜಾತಿ ಮತ್ತು ಧರ್ಮದ ಭಕ್ತರಿಗೆ ಜಾಗೃತ ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗಿದೆ. ಅಶ್ವಿನಿ ನಕ್ಷತ್ರದ ಶೀಗೆ ಹುಣ್ಣಿಮೆಯಂದು ಐದು ದಿನಗಳ ಕಾಲ ನಡೆಯುವ ಅತಿದೊಡ್ಡ ಜಾತ್ರೆಯಲ್ಲಿ ಎಲ್ಲಾ ಜಾತಿ, ಧರ್ಮಗಳ ಭಕ್ತರು ಸೇರುತ್ತಾರೆ'[6]

ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲೂಕಿನಲ್ಲಿ ಶ್ರೀ ಹಾಲಸಿದ್ಧನಾಥರ ಶ್ರೀ ಕ್ಷೇತ್ರ ಅಪ್ಪಾಚಿವಾಡಿ ಮತ್ತು ಕುರ್ಲಿಗಳಾದ ಜಾಗೃತ ಮತ್ತು ಪವಿತ್ರ ಕ್ಷೇತ್ರಗಳಿವೆ. ಇವೆರಡು ಬೇರೆ ಬೇರೆ ಹಳ್ಳಿಗಳಂತೆ ಕಂಡು ಬರುತ್ತದೆಯಾದರೂ, ಅವರನ್ನು ಶ್ರೀ ಹಾಲಸಿದ್ಧನಾಥರ ಮೇಲಿನ ನಂಬಿಕೆ ಮತ್ತು ಪ್ರೀತಿ ಅನ್ಯೋನ್ಯವಾಗಿ ಬೆಸೆದಿದೆ. ಶ್ರೀ ಕ್ಷೇತ್ರ ಅಪ್ಪಾಚಿವಾಡಿ ಮತ್ತು ಕುರ್ಲಿಯಲ್ಲಿ ಶ್ರೀ ಹಾಲಸಿದ್ಧನಾಥ ದೇವರ ಜಾತ್ರೆಯ ಮುಖ್ಯ ವೈಶಿಷ್ಟ್ಯವೆಂದರೆ 'ಭವಿಷ್ಯವಾಣಿ'! ಶ್ರೀ ಹಾಲಸಿದ್ಧನಾಥ ದೇವರು ಭವಿಷ್ಯದಲ್ಲಿ ನಡೆಯುವ ಘಟನೆಗಳ ಬಗ್ಗೆ ಗೇಯ ರೂಪದಲ್ಲಿ ಪೂ. ಭಗವಾನ ಡೋಣೆ (ವಾಘಾಪುರೆ) ಮಹಾರಾಜರು ಭವಿಷ್ಯವಾಣಿ ಹೇಳುತ್ತಾರೆ. ಇದನ್ನು ವೀಕ್ಷಿಸಿ ದೇವರ ಪ್ರಸಾದವನ್ನು ಪಡೆಯಲು ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಸಾವಿರಾರು ಭಕ್ತರು ಶ್ರೀ ಕ್ಷೇತ್ರ ಅಪ್ಪಾಚಿವಾಡಿಗೆ ಆಗಮಿಸುತ್ತಾರೆ.

ಹಾಲಸಿದ್ಧನಾಥರ ದೇವಸ್ಥಾನಗಳು ಕರ್ನಾಟಕ–ಮಹಾರಾಷ್ಟ್ರ ಎರಡು ರಾಜ್ಯಗಳಲ್ಲಿ ಕಂಡುಬರುತ್ತವೆ. ಅದರಲ್ಲೂ ಬೆಳಗಾವಿ ಜಿಲ್ಲೆಯ ರಾಯಭಾಗ, ಹುಕ್ಕೇರಿ, ಚಿಕ್ಕೋಡಿ, ಗೋಕಾಕ, ಮೂಡಲಗಿ ಮತ್ತು ನಿಪ್ಪಾಣಿ ತಾಲೂಕುಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ರಾಯಭಾಗ ತಾಲೂಕಿನ ಕಂಕಣವಾಡಿ, ಚಿಕ್ಕೋಡಿ ತಾಲೂಕಿನ ನಣದಿ, ಹಂಡ್ಯಾನವಾಡಿ, ಖಡಕಲಾಟ, ನವಲಿಹಾಳ, ಪಟ್ಟಣಕುಡಿ, ಹುಕ್ಕೇರಿ ತಾಲೂಕಿನ ಹುಕ್ಕೇರಿ ನಗರ, ಹುಲ್ಲೊಳ್ಳಿ, ಗೋಟುರ, ಮೂಡಲಗಿ ತಾಲೂಕಿನ ಅವರಾದಿ, ವಡ್ಡೇರಟ್ಟಿ, ಗೋಕಾಕ ತಾಲೂಕಿನ ಮಿಡಕನಟ್ಟಿ(ಖನಗಾಂವ), ನಿಪ್ಪಾಣಿ ತಾಲೂಕಿನ ಅಪ್ಪಾಚಿವಾಡಿ, ಕುರ್ಲಿ, ಭಾಟನಾಗನೂರ, ನಿಪ್ಪಾಣಿ ನಗರ, ಸೌಂದಲಗಾ ಸೇರಿದಂತೆ ಅನೇಕ ಕಡೆಗಳಲ್ಲಿ ಹಾಲಸಿದ್ಧನಾಥರ ದೇವಸ್ಥಾನಗಳು ಕಂಡುಬರುತ್ತವೆ. ಹಾಲಸಿದ್ಧನಾಥರು ಸಂಚರಿಸಿದ, ವಾಸ್ತವ್ಯ ಹೂಡಿದ, ಸಮಾಧಿ ಹೊಂದಿದ ಸ್ಥಳಗಳು ಸ್ಮಾರಕಗಳಾಗಿ ಪುಣ್ಯಕ್ಷೇತ್ರಗಳಾಗಿವೆ.

**ನಿಪ್ಪಾಣಿ**

ನಗರದ ಉತ್ತರಕ್ಕೆ 2ಕಿ.ಮೀ ಅಂತರದಲ್ಲಿರುವ ಈ ದೇವಾಲಯವು ಅಕ್ಕೋಳ ರಸ್ತೆಯ ಜತ್ರಾಟ ವೃತ್ತದ ಬಳಿ ಇದೆ. ಈ ದೇವಾಲಯವನ್ನು 1996ರಲ್ಲಿ ಶಂಕರರಾವ ಸಾಸನೆಯವರ ಮುಂದಾಳತ್ವದಲ್ಲಿ ಸ್ಥಾಪಿಸಲಾಯಿತು. ಇಲ್ಲಿ ಶ್ರೀ ಹಾಲಸಿದ್ಧನಾಥನ ಸುಂದರ ವಿಗ್ರಹವಿದೆ. ಇಲ್ಲಿ ಹಾಲಸಿದ್ಧನಾಥರು ಕುರ್ಲಿ ಮಾರ್ಗವಾಗಿ ಹೊರಡುವ ಮುನ್ನ ಧ್ಯಾನಸ್ಥರಾಗಿ ಕುಳಿತ ಸ್ಥಳವಿದು ಎಂಬ ಪ್ರತೀತಿ ಇದೆ. ಶೀಗೆ ಹುಣ್ಣಿಮೆಯಂದು ಅಶ್ವಿನ ನಕ್ಷತ್ರದಲ್ಲಿ ನಾಥರ ಪಲ್ಲಕ್ಕಿಯು ಹೊರಟು ಜಾತ್ರೆಯು ಪ್ರಾರಂಭವಾಗುತ್ತದೆ. ಈ ವೇಳೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

**ಶ್ರೀಕ್ಷೇತ್ರ ಹಾಲಸಿದ್ಧನಾಥ ದೇವಸ್ಥಾನ ಅಪ್ಪಾಚಿವಾಡಿ**

ಕುರ್ಲಿಯ ಮಡ್ಡಿ(ಮಾಳಾವರ) ಭಾಗದ ಮೇಲೆ ಹಾಲಸಿದ್ಧನಾಥ ಐಕ್ಯವಾಗಿರುವ ಸಮಾಧಿ ಇರುವುದರಿಂದ ಹಾಲಸಿದ್ಧನಾಥನ 'ಅಪ್ಪಾಚಿ ವಾಡಿ(ಅಪ್ಪನಹಟ್ಟಿ)' ಎಂದು ಜನ ಕರೆಯುತ್ತಾರೆ. ಈ ಸ್ಥಳನಾಮವು ಅಪ್ಪ+ಚಿ+ವಾಡಿ = ಅಪ್ಪಾಚಿವಾಡಿ ಎಂದಾಗುತ್ತದೆ. ಅಪ್ಪ ಎಂಬ ನಿರ್ದಿಷ್ಟವು ಇದು ಕನ್ನಡ ಶಬ್ಧವಾಗಿದ್ದು, ಅಪ್ಪ ಎಂದರೆ ತಂದೆ, ಕಾಯುವವ, ರಕ್ಷಿಸುವವ, ಉದ್ಧರಿಸುವವ ಎಂದು ಭಾವಿಸಬಹುದು. ಚಿ ಇದು ಮರಾಠಿ ಶಬ್ಧವಾಗಿದ್ದು, ಚಿ ಎಂದರೆ ಅವರ, ನವರ ಎಂದರ್ಥ, ವಾಡಿ ಇದು ವಸತಿ ಸೂಚಕ ವಾರ್ಗಿಕವಾಗಿದ್ದು, ಅಪ್ಪಾಚಿವಾಡಿಯ ಮೂಲ ಹೆಸರು ಅಪ್ಪನ ಹಟ್ಟಿ ಎಂದೇ ಇರಬೇಕು. ಬರಬರುತ್ತಾ ಮರಾಠಿಯ ಪ್ರಾಬಲ್ಯದಿಂದ ಜನರ ಆಡುನುಡಿಯಲ್ಲಿ ಅಪ್ಪಾಚಿವಾಡಿ ಎಂದಾಗಿ ಆಡಳಿತದಲ್ಲೂ ಇದೇ ಹೆಸರು ಖಾಯಂ ಆದಂತೆ ಕಾಣುತ್ತದೆ.

ನಿಪ್ಪಾಣಿ ತಾಲೂಕಾ ಕೇಂದ್ರದಿಂದ 17ಕಿ.ಮೀ. ಅಂತರದಲ್ಲಿರುವ ಅಪ್ಪಾಚಿವಾಡಿಯ ಹಾಲಸಿದ್ಧನಾಥ ದೇವಸ್ಥಾನವು ಕರ್ನಾಟಕ–ಮಹಾರಾಷ್ಟ್ರಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಐಕ್ಯತೆಯ ಪ್ರತೀಕ, ಸರ್ವಧರ್ಮಗಳ ಭಾವೈಕ್ಯತೆಯ ತಾಣವಾಗಿ ಹಾಗೂ ರಾಷ್ಟ್ರೀಯ ಏಕತೆಯನ್ನು ಬಿಂಬಿಸುತ್ತಿರುವ ಅಪ್ಪಾಚಿವಾಡಿಯ ಹಾಲಸಿದ್ಧನಾಥ ದೇವಸ್ಥಾನವು ಜಾಗೃತ ಆಧ್ಯಾತ್ಮಪೀಠವೆಂದು ಪ್ರಸಿದ್ಧವಾಗಿದೆ. ತನ್ನದೇ ಆದ ವಿಶಿಷ್ಟ ಸಂಪ್ರದಾಯ, ನಂಬಿಕೆ, ಆಚರಣೆಗಳ ಮೂಲಕ ಈ ಭಾಗದ ಜನರ ಆರಾಧ್ಯದೈವನೆಂದೇ ಹಾಲಸಿದ್ಧನಾಥನನ್ನು ಜನ ಪೂಜಿಸುತ್ತಾರೆ.

ಭಾರತದಾದ್ಯಂತ ಆಧ್ಯಾತ್ಮಿಕ ಪುಣ್ಯಕ್ಷೇತ್ರವೆಂದು ಹೆಸರುವಾಸಿಯಾಗಿರುವ ಶ್ರೀ ಹಾಲಸಿದ್ಧನಾಥರ ಅಪ್ಪಾಚಿವಾಡಿ ಶ್ರೀಕ್ಷೇತ್ರವು ಇಂದು ಸರ್ವಧರ್ಮಗಳ ಭಾವೈಕ್ಯತೆಯ ತಾಣವಾಗಿದೆ. ಅಪ್ಪಾಚಿವಾಡಿ ಗ್ರಾಮದ ಮಧ್ಯಭಾಗದಲ್ಲಿಯೇ ಹಾಲಸಿದ್ಧನಾಥನ ದೇವಾಲಯವಿದೆ. ಊರಾಚೆ ಸ್ವಲ್ಪ ದೂರದಲ್ಲಿ ಹಾಲಸಿದ್ಧನಾಥನ ಸಮಾಧಿಯಿದೆ. ಇವೆರಡರ ಮಧ್ಯದಲ್ಲಿ ಹಳ್ಳ ಒಂದು ಹರಿದಿದೆ. ಗುರುವಾರ, ರವಿವಾರದ ಅಮವಾಸ್ಯೆಯ ದಿನ ಹಾಗೂ ದಸರೆಯ ದಿವಸ ಹಾಲಸಿದ್ಧನಾಥರ ದರ್ಶನಕ್ಕಾಗಿ ಜನರು ಭಾರಿ ಸಂಖ್ಯೆಯಲ್ಲಿ ಸೇರುತ್ತಿರುತ್ತಾರೆ. ಭಂಡಾರವನ್ನು ಹಣೆಗೆ ಹಚ್ಚಿಕೊಂಡು ಪುನಿತರಾಗುತ್ತಾರೆ.

ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲೂಕಿನ ಅಪ್ಪಾಚಿವಾಡಿಯಲ್ಲಿ ಪ್ರತಿವರ್ಷ ಶೀಗೆ ಹುಣ್ಣಿಮೆಯಂದು ಪ್ರಾರಂಭವಾಗುವ ಈ ಜಾತ್ರೆ 5 ದಿನಗಳವರೆಗೆ ನಡೆಯುತ್ತದೆ. ಮೂಲತಃ ಈ ದೇವರು ಕುರುಬರ ದೇವರಾಗಿದ್ದು, ಇಲ್ಲಿ ಎರಡೂ ದೇವಾಲಯಗಳ ಪೂಜಾರಿಗಳು ಕೂಡ ಕುರುಬರಾಗಿದ್ದಾರೆ. ಆದರೆ ವಿಶೇಷವೆಂದರೆ ಈ ದೇವರಿಗೆ ಎಲ್ಲ ಧರ್ಮದವರು ನಡೆದುಕೊಳ್ಳುವರು. ಅಷ್ಟೇ ಅಲ್ಲ ಮುಸ್ಲಿಮರೂ ಕೂಡ ಈ ದೇವರಿಗೆ ತಮ್ಮ ಹರಕೆಯನ್ನು ಒಪ್ಪಿಸುತ್ತಾರೆ. ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಮಹಾರಾಷ್ಟ್ರದ ಗಡಿಭಾಗದಲ್ಲಿ ಈ ಎರಡೂ ಹಳ್ಳಿಗಳಿರುವದರಿಂದ ಮರಾಠಿಯೇ ಇಲ್ಲಿಯ ಪ್ರಮುಖ ಭಾಷೆಯಾಗಿದೆ. ಆದರೆ ಕರ್ನಾಟಕದ ಇತರೆಡೆಗಳಲ್ಲಿ ಕಂಡುಬರುವ ಸಂಪ್ರದಾಯಗಳೆಲ್ಲ ಇಲ್ಲಿ ಕಂಡುಬರುತ್ತವೆ.

ವಿಶೇಷವಾಗಿ ಕರ್ನಾಟಕದ ಜಾನಪದ ವಾದ್ಯ, ಡೊಳ್ಳು ಬಾರಿಸುವದು ಈ ಜಾತ್ರೆಯಲ್ಲಿ ಕಂಡು ಬರುವ ವೈಶಿಷ್ಟ್ಯ. ಜಾತ್ರೆಯು ಪ್ರಾರಂಭವಾಗುವುದಕ್ಕಿಂತ ಎರಡು ವಾರಗಳ ಮುಂಚೆ ಡೊಳ್ಳು ಬಾರಿಸುವ ತಯಾರಿ ನಡೆಯುತ್ತದೆ. ಪ್ರತಿದಿನ ಸಂಜೆ ರೈತರು ಅಭ್ಯಾಸಕ್ಕಾಗಿ ಎಂಬಂತೆ ಡೊಳ್ಳು ಬಾರಿಸಲು ತೆರಳುತ್ತಾರೆ. ದೇವರಿಗೆ ಹರಕೆ ಹೊತ್ತಿರುವವರೂ ಡೊಳ್ಳು ಬಾರಿಸಲು ತೆರಳುತ್ತಾರೆ. ವಯಸ್ಸಿನ ಅಂತರವಿಲ್ಲದೇ ಮಕ್ಕಳು, ಯುವಕರು, ವಯಸ್ಸಾದವರೂ ಸಹ ಪಾಲ್ಗೊಳ್ಳುತ್ತಾರೆ. ಅವರಲ್ಲೇ ಕೆಲವರನ್ನು ಆಯ್ಕೆ ಮಾಡಿ, ಡೊಳ್ಳು ಬಾರಿಸುವ ಗುಂಪು ತಯಾರಾಗುತ್ತದೆ. ಕುರ್ಲಿಯವರದ್ದು ಒಂದು ಗುಂಪಾದರೆ, ಅಪ್ಪಾಚಿವಾಡಿಯವರದ್ದು ಇನ್ನೊಂದು ಗುಂಪು. ಈ ಡೊಳ್ಳು ಬಾರಿಸುವವರಿಗೆ ಪ್ರತಿನಿತ್ಯ ಹಾಲು, ಹಣ್ಣು ಮುಂತಾದವುಗಳನ್ನು ಹಳ್ಳಿಯ ಪ್ರತಿ ಮನೆಯವರು ತಮ್ಮ ಶಕ್ತಿಗನುಸಾರವಾಗಿ ಕಳುಹಿಸುತ್ತಾರೆ. ಈ ರೀತಿ ತರಬೇತಿ ಹೊಂದಿದ ಆ ಡೊಳ್ಳಿನ ಗುಂಪು ಜಾತ್ರೆಯ ಹಿಂದಿನ ದಿನ ಸಾಯಂಕಾಲದಲ್ಲಿ ಕುರ್ಲಿಯಿಂದ ಪಲ್ಲಕ್ಕಿ ಉತ್ಸವದೊಂದಿಗೆ ಅಪ್ಪಾಚಿವಾಡಿಗೆ ಬಂದಿಳಿಯುತ್ತಾರೆ. ದೇವಾಲಯದಲ್ಲಿ ಪಲ್ಲಕ್ಕಿ ಇಟ್ಟು ಮೊದಲೇ ದೇವಾಲಯದ ಮುಂದೆ ಹಾಕಿದ ಹಂದರದಲ್ಲಿ ಒಂದೆಡೆ ಕುರ್ಲಿಯಿಂದ ಹೋದ ಡೊಳ್ಳಿನ ಗುಂಪು, ಮತ್ತೊಂದಡೆ ಅಪ್ಪಾಚಿವಾಡಿಯ ಡೊಳ್ಳಿನ ಗುಂಪು ಸಾಲಾಗಿ ನಿಂತು ಡೊಳ್ಳು ಬಾರಿಸಲು ಪ್ರಾರಂಭಿಸುತ್ತಾರೆ. ಅಂದು ಡೊಳ್ಳು ಬಾರಿಸುವವರೆಲ್ಲ ಉಪವಾಸವಿದ್ದು, ಹರಕೆ ಹೊತ್ತವರು ಆವೇಶದಿಂದ ರಾತ್ರಿಯಿಡೀ ಡೊಳ್ಳು ಬಾರಿಸುವ ಮೂಲಕ ದೇವರಿಗೆ ಹರಕೆ ಸಲ್ಲಿಸುತ್ತಾರೆ. ಇದಕ್ಕಾಗಿ ದೂರದೂರುಗಳಿಂದ ಚಕ್ಕಡಿ ಗಾಡಿಗಳಲ್ಲಿ ಬಂದ ಜನ ಅಲ್ಲಲ್ಲಿ ತಂಗಿರುತ್ತಾರೆ. ಆವತ್ತು ರಾತ್ರಿಯಿಡೀ ಡೊಳ್ಳು ಬಾರಿಸುವದು ಮುಗಿದ ನಂತರ ಬೆಳಗಿನ ಜಾವ ಹೇಳಿಕೆ ಪ್ರಾರಂಭವಾಗುತ್ತದೆ. ಇದಕ್ಕೆ ಮರಾಠಿಯಲ್ಲಿ **"ಭಾಕಣೂಕ"** ಎಂದು ಕರೆಯುತ್ತಾರೆ. **'**ಹಾವೇರಿ ಭಾಗದಲ್ಲಿ ಮೈಲಾರನ ಕಾರಣಿಕವೆಂದು ಕೆಲವೆಡೆ ಭವಿಷ್ಯ ನುಡಿ ಎಂದೂ, ಮತ್ತೊಂದೆಡೆ ಭವಿಷ್ಯ ನುಡಿ ಎಂದು ಕರೆಯಲಾಗುತ್ತದೆ**'**[7] ಈ 'ಭಾಕಣೂಕ(ಭವಿಷ್ಯ)'ಗಾಗಿಯೇ ಜನರು ಕುತೂಹಲಿಗಳಾಗಿ ಕಾದಿರುತ್ತಾರೆ. 'ಭಾಕಣೂಕಿ' ಹೇಳುವವನು

ಆ ಹೊತ್ತು ಇಡೀ ದಿನ ಉಪವಾಸವಿದ್ದು, ದೇವಾಲಯದಲ್ಲೇ ತಂಗಿದ್ದು, ಬೆಳಗಿನ ಜಾವಕ್ಕೆ ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿಯೇ ಬಂದು ದೇವಾಲಯದ ಎದುರುಗಡೆ ಮಧ್ಯಭಾಗದಲ್ಲಿ ನಿಂತು ಸುಮಾರು ಅರ್ಧ ಗಂಟೆಯವರೆ ಭವಿಷ್ಯ ನುಡಿಯುತ್ತಾನೆ. ಈ ಭಾಕಣೂಕದ ಭಾಷೆ ಮಾತ್ರ ಸರಳವಾಗಿ ಅರ್ಥವಾಗುವಂತಿರದೆ ಒಗಟಿನಲ್ಲಿದ್ದು, ಅದೂ ಸಹ ಮರಾಠಿಯಲ್ಲಿರುತ್ತದೆ. ವಿಶೇಷವೆಂದರೆ ಈ ಭಾಕಣೂಕ ಹೇಳುವ ಪರಿಪಾಠ ಅನುವಂಶಿಕವಾಗಿ ಬಂದಿದ್ದು, ಇಂದು ಪೂ. ಭಗವಾನ ಡೋಣೆ ಮಹಾರಾಜರವರೆಗೂ ಮುಂದುವರೆದಿದೆ. ಭಾಕಣೂಕ ಹೇಳುವವನು ದೇಶದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯ ಭವಿಷ್ಯ ನುಡಿಯುತ್ತಾನೆ. ಅಲ್ಲದೇ ಅಪ್ಪಾಚಿವಾಡಿ, ಕುರ್ಲಿ ಅಲ್ಲಿಯ ಮಳೆ ಬೆಳೆಯ ಬಗ್ಗೆಯೂ ಹೇಳುತ್ತಾನೆ. ಅಲ್ಲಿಯ ಜನರು ಈ ಭವಿಷ್ಯವನ್ನು ಬಹಳೇ ನಂಬುತ್ತಾರೆ.

ಈ ಭಾಕಕ ಹೇಳುವುದಕ್ಕಿಂತ ಸ್ವಲ್ಪದರಲ್ಲೇ ಕತ್ತಿವರಸೆ ಆಟವಾಡುತ್ತಾನೆ. ಮಧ್ಯದಲ್ಲಿಯೇ ಅಪ್ಪಾಚಿವಾಡಿ ದೇವರ ಹೆಸರಿನಲ್ಲಿ ಬಿಟ್ಟ ಕುದುರೆ ಮತ್ತು ಕುರ್ಲಿಯ ದೇವರ ಕುದುರೆ ಎರಡನ್ನು ತೆಗೆದುಕೊಂಡು ಬಂದು ಹಾಗೆಯೇ ಒಂದು ಸುತ್ತು ಹಾಕಿಸಿ ಹೋಗುತ್ತಾರೆ. ಇದಾದ ನಂತರ ದೇವರಿಗೆ ಬೇಡಿಕೊಂಡ ಭಕ್ತಾದಿ ಜನರು ತಮ್ಮ ಹರಕೆಯನ್ನು ಸಲ್ಲಿಸುತ್ತಾರೆ. ವಿಶೇಷವೆಂದರೆ ಇಲ್ಲಿ ಭಂಡಾರವನ್ನು ದೇವರಿಗೆ ಹಾರಿಸುವುದು ಹೆಚ್ಚಾಗಿ ಕಂಡುಬರುತ್ತದೆಯಲ್ಲದೇ ಗುಡಿಯೆಲ್ಲಾ ಭಂಡಾರದಿಂದಲೇ ತುಂಬಿ ಹೋಗಿರುತ್ತದೆ. ಹೀಗೆ 5 ದಿನಗಳವರೆಗೆ ಉತ್ಸವ ನಡೆದಿರುತ್ತದೆ. ಬಂದ ಜನಕೆಲ್ಲಾ ಶ್ರೀಮಂತ ಮನೆತನದವರು ಊಟಕ್ಕೆ ಹಾಕಿಸುವ ಏರ್ಪಾಟು ಮಾಡಿರುತ್ತಾರೆ. ಅವರೂ ಕೂಡ ಹಾಗೆಂದು ದೇವರಿಗೆ ಹರಕೆ ಹೊತ್ತಿರುತ್ತಾರೆ. ಕುರ್ಲಿಯ ದೇವಸ್ಥಾನದ ಪಲ್ಲಕ್ಕಿಯು 5 ದಿನಗಳವರೆಗೆ ಅಲ್ಲಿಯೇ ಇದ್ದು, ನಂತರ ಕೊನೆಯ ದಿನ ಡೊಳ್ಳುವಾದ್ಯದ ಸಮೇತ ಊರಿಗೆ ಮರಳುತ್ತದೆ. ಪಲ್ಲಕ್ಕಿಯು ಊರಲ್ಲಿ ಬಂದಾಗ ಪ್ರತಿಮನೆಯವರು ಬಂದು ಆ ಡೊಳ್ಳು ಬಾರಿಸುವವರಿಗೆ ರಾಗಿ ಹಿಟ್ಟಿನಿಂದಲೋ ಅಥವಾ ಜೋಳದ ಹಿಟ್ಟಿನಿಂದಲೋ ತಯಾರಿಸಿದ ಅಂಬಲಿಯನ್ನು ಕುಡಿಸಿ ಪಲ್ಲಕ್ಕಿಗೆ ನಮಸ್ಕರಿಸುತ್ತಾರೆ. ಇಲ್ಲಿಗೆ ಸಂತ ಹಾಲಸಿದ್ಧನಾಥನ ಜಾತ್ರೆ ಮುಕ್ತಾಯವಾಗುತ್ತದೆ.

ಶ್ರೀ ಹಾಲಸಿದ್ಧನಾಥರ ಪಲ್ಲಕ್ಕಿ, ಕಾರಿ ಮರ(ಶ್ರೀ ಹಾಲಸಿದ್ಧನಾಥರ ಅವರ ವಿಶ್ರಾಂತಿಯ ಸ್ಥಳ), ಶ್ರೀ ಹಾಲಸಿದ್ಧನಾಥರ ಪ್ರತಿಮೆ ಇವುಗಳು ಇಲ್ಲಿಯೇ ಕಂಡುಬರುತ್ತವೆ.

**ಕುರ್ಲಿ**

ಅಪ್ಪಾಚಿವಾಡಿಯಿಂದ ನಾಲ್ಕೈದು ಮೈಲುಗಳ ಅಂತರದಲ್ಲಿ ಕುರ್ಲಿ ಎನ್ನುವ ಮತ್ತೊಂದು ಹಳ್ಳಿ. ಅಲ್ಲಿಯೂ ಕೂಡ ಹಾಲಸಿದ್ಧನಾಥ ದೇವಸ್ಥಾನವಿದೆ. ಅಶ್ವಿನಿ ನಕ್ಷತ್ರದ ಶೀಗೆ ಹುಣ್ಣಿಮೆಯ ದಿನದಂದು, ಡೊಳ್ಳು ವಾದನದೊಂದಿಗೆ ನಾಥರ ಪಲ್ಲಕ್ಕಿಯು ಕುರ್ಲಿಯಿಂದ ಅಪ್ಪಾಚಿವಾಡಿಗೆ ಹೊರಡುತ್ತದೆ.

'ಗಿರಿ, ಪುರಿ, ಭಾರತಿ ಮತ್ತು ಗೋಸಾವಿ ಎಂಬ ನಾಲ್ಕು ಪಂಥಗಳಲ್ಲಿ ಕುರ್ಲಿಯಲ್ಲಿ ಗಿರಿ ಪಂಥದ ಮಠವಿದೆ. ಶ್ರೀ ರಾಜಗಿರಿ ಮಹಾರಾಜ ಎಂಬ ಬಹಳ ಜ್ಞಾನಸಂಪನ್ನ ಮಹಾತ್ಮರಿದ್ದರು. ಅವರು ಆಗಷ್ಟೇ ಸಂಜೀವನ ಸಮಾಧಿಯನ್ನು ಸ್ವೀಕರಿಸಿದ್ದರು. ಆ ಸಮಾಧಿಗೆ ಭೇಟಿ ನೀಡಿದ ತಕ್ಷಣ ನಾಥರಿಗೆ ತನ್ನ ಸಮಾಧಿಗೂ ಈ ಭೂಮಿ ಅತ್ಯಂತ ಸೂಕ್ತವೆಂದು ಅರಿವಾಯಿತು. ಶ್ರೀ ರಾಜಗಿರಿ ಮಹಾರಾಜರೊಂದಿಗೆ ಧ್ಯಾನದಲ್ಲಿ ಚರ್ಚಿಸಿ, ಅವರು ತಮ್ಮ ಸಮಾಧಿಯ ಸಮಯ, ಸ್ಥಳ ಇತ್ಯಾದಿಗಳನ್ನು ನಿರ್ಧರಿಸಿರಬೇಕು'[8] ಕೆಲವು ದಿನಗಳವರೆಗೆ ನಾಥರು ಕುರ್ಲಿಯಲ್ಲಿ ವಾಸಿಸಿದರು. ನಾಥರ ವಾಸ್ತವ್ಯದಿಂದ ಗ್ರಾಮದ 5 ಸ್ಥಳಗಳು

ಪವಿತ್ರವಾಗಿವೆ. ಊರಿನಲ್ಲಿದ್ದ ಕೆಲವು ಧೂರ್ತ ಯುವಕರಿಗೆ ಶಾಪ ಹಾಕಿ ನಾಥರು ಹಳ್ಳಿಯಿಂದ ಹೊರಹಾಕಿದರು. ನಂತರ ಕುರ್ಲಿಯಲ್ಲಿ ಹರಿಯುವ ಹಳ್ಳದ ತೀರದಲ್ಲಿರುವ ವಸಾಹತಿಗೆ ಬಂದರು. ಅದರ ನಂತರ, ಚೈತ್ರ ಮಾಸದ ಹುಣ್ಣಿಮೆಯಂದು, ನಾಥರು ಹಳ್ಳದ ಹತ್ತಿರವಿರುವ ಹುಣಸೆ ಮರಗಳ ತೋಟದಲ್ಲಿ ಸಮಾಧಿ ಸ್ವೀಕರಿಸಿದರು. ಆದ್ದರಿಂದ, ಶ್ರೀ ಹಾಲಸಿದ್ಧರು ಅಲ್ಲಿ ನೆಲೆಸಿದ್ದರಿಂದ ಆ ವಸಾಹತಿಗೆ 'ಅಪ್ಪಾಚಿ ವಾಡಿ' ಎಂದು ಜನ ಕರೆಯಲು ಪ್ರಾರಂಭಿಸಿದರು. ಅಪ್ಪಾಚಿವಾಡಿಯ ಜಾತ್ರೆಯ ಸಂದರ್ಭದಲ್ಲಿ ಕುರ್ಲಿಯ ದೇವಸ್ಥಾನದ ಪಲ್ಲಕ್ಕಿಯು 5 ದಿನಗಳವರೆಗೆ ಅಲ್ಲಿಯೇ ಇದ್ದು, ನಂತರ ಕೊನೆಯ ದಿನ ಡೊಳ್ಳುವಾದ್ಯದ ಸಮೇತ ಕುರ್ಲಿ ಊರಿಗೆ ಮರಳುತ್ತದೆ. ಹಾಲಸಿದ್ಧನಾಥರ ದೇವಸ್ಥಾನವು ಕುರ್ಲಿಯ ಬಸ್ ನಿಲ್ದಾಣದಲ್ಲಿದ್ದು, ಅಲ್ಲಿ ಭವ್ಯವಾದ ದೇವಸ್ಥಾನದ ಜೊತೆಗೆ ಪಾದಗಟ್ಟಿ, ಹಾಲಸಿದ್ಧನಾಥರು ಅಂಬಲಿ ಸ್ವೀಕರಿಸಿದ ಸ್ಥಳ, ರಾಜಗಿರಿ ಮಠಗಳನ್ನು ಈ ಗ್ರಾಮದಲ್ಲಿ ಕಾಣಬಹುದು.

**ಭಾಟನಾಗನೂರ**

ನಾಗನಾಥ ಮತ್ತು ಹಾಲಸಿದ್ಧನಾಥ ಈ ಇಬ್ಬರ ದೇವಸ್ಥಾನವು ಒಂದೇ ಗುಡಿಯಲ್ಲಿಯಲ್ಲಿರುವುದು ಕಂಡುಬರುತ್ತದೆ. ಇದು ಒಂದು ಮಠದಂತೆಯೇ ಇದ್ದು, ಇಲ್ಲಿ ಪೂ.ಚೈತನ್ಯನಾಥ ಮಹಾರಾಜರು(ಸ್ವಾಮೀಜಿ) ಇರುತ್ತಾರೆ. ಮೂಲ ದೇವಸ್ಥಾನದಲ್ಲಿ ಕೇವಲ ನಾಗನಾಥರು ಮಾತ್ರ ಇದ್ದರು. ನಂತರ 2009ರಲ್ಲಿ ಪೂ.ಚೈತನ್ಯನಾಥ ಮಹಾರಾಜರು(ಸ್ವಾಮೀಜಿ) ಬಂದ ಬಳಿಕ ಹಾಲಸಿದ್ಧನಾಥರ ಸ್ಥಾಪನೆಯಾಯಿತು. ದಸರೆಯ ಸಂದರ್ಭ ಹಾಗೂ ಯುಗಾದಿಯ ಸಂದರ್ಭದಲ್ಲಿ ಅಪ್ಪಾಚಿವಾಡಿಯಲ್ಲಿ ಜಾತ್ರೆ ನಡೆಯುತ್ತಿರುವ ಸಂದರ್ಭದಲ್ಲಿ ಏಕಕಾಲಕ್ಕೆ ಇಲ್ಲಿಯೂ ಕೂಡಾ ಭಂಡಾರದ ಅಭಿಷೇಕ ನಡೆಯುತ್ತದೆ. ಗ್ರಾಮಸ್ಥರೆಲ್ಲರೂ ಕೂಡಿಕೊಂಡು ಚೈತನ್ಯನಾಥ ಮಹಾರಾಜರ ಸಾನಿಧ್ಯದಲ್ಲಿ ಜಾತ್ರೆಯನ್ನು ನೆರವೇರಿಸುತ್ತಾರೆ.

**ಪಟ್ಟಣಕುಡಿ**

1990ರ ಸುಮಾರಿಗೆ ಪಟ್ಟಣಕುಡಿ ಗ್ರಾಮದಲ್ಲಿ ಹಾಲಸಿದ್ಧನಾಥ ದೇವಸ್ಥಾನವು ಸ್ಥಾಪನೆಯಾಗಿದ್ದು, ನಿಪ್ಪಾಣಿ–ಚಿಕ್ಕೋಡಿ ಮುಖ್ಯ ರಸ್ತೆಯ ಬದಿಯಲ್ಲಿಯೇ ಈ ದೇವಸ್ಥಾನವಿದೆ. ಪ್ರತಿವರ್ಷದ ಏಪ್ರಿಲ್ 15ರಂದು ಜಾತ್ರೆ ನಡೆಯುತ್ತದೆ. ಜಾತ್ರೆಯ ಸಂದರ್ಭದಲ್ಲಿ ಅನ್ನಸಂತರ್ಪಣೆ, ಗ್ರಾಮದ ಬೀರದೇವ ಮಂದಿರದಿಂದ ಪಲ್ಲಕ್ಕಿಯು ಬರುತ್ತದೆ. ಅಪ್ಪಾಚಿವಾಡಿಯಿಂದ ಭಾಕನೂಕ ಹೇಳುವ ಡೋಣೆ ಮಹಾರಾಜರು ಆ ಜಾತ್ರೆಯ ದಿನ ಬಂದು ಭಾಕನೂಕ ಹೇಳುತ್ತಾರೆ. ಶಂಕರ ಟಾಕಳೆಯವರು ದೇವಸ್ಥಾನದ ಪೂಜಾರಿಗಳಾಗಿದ್ದು, ಪ್ರತಿ ಗುರುವಾರ, ರವಿವಾರ ಮತ್ತು ಅಮವಾಸ್ಯೆಯ ದಿನ ಜನ ಬರುತ್ತಿರುತ್ತಾರೆ.

**ಹಂಡ್ಯಾನವಾಡಿ**

ಇದು ಹಳೆಯ ಕಾಲದ ಹಾಲಸಿದ್ಧನಾಥರ ದೇವಸ್ಥಾನವಾಗಿದ್ದು, 1996ರಲ್ಲಿ ಈ ದೇವಸ್ಥಾನವನ್ನು ಚಿಂಚಣಿಯ ಪೂಜ್ಯರಾದ ಅಲ್ಲಮಪ್ರಭು ಸ್ವಾಮಿಜೀಗಳ ಮುಂದಾಳತ್ವದಲ್ಲಿ ಜೀರ್ಣೋದ್ಧಾರ ಗೊಳಿಸಲಾಯಿತು. ಸಾಮಾನ್ಯವಾಗಿ ಹಾಲುಮತ ಸಮುದಾಯವು ಅಧಿಕವಾಗಿರುವ ಊರುಗಳಲ್ಲಿ ಹಾಲಸಿದ್ಧನಾಥರ ಭವ್ಯವಾದ ದೇವಸ್ಥಾನಗಳಿರುವುದನ್ನು ಕಾಣುತ್ತೇವೆ. ಆದರೆ ಈ ಗ್ರಾಮದಲ್ಲಿ ಸಂಪೂರ್ಣವಾಗಿ ಹಣಬರ ಸಮುದಾಯವಿದ್ದು, ದೇವಸ್ಥಾನದ ಜಾಗ ಮಾತ್ರ ಚಿಂಚಣಿಯ ಹಾಲುಮತ

ಸಮುದಾಯಕ್ಕೆ ಸೇರಿದ್ದು ವಿಶೇಷವಾಗಿದೆ. ಯುಗಾದಿಯ ನಂತರ ಮೊದಲನೇ ಭಾನುವಾರ ಇಲ್ಲಿ ಜಾತ್ರೆ ನಡೆಯುತ್ತದೆ. ಬಂದ ಭಕ್ತಾದಿಗಳಿಗೆ ಅಂಬಲಿ ಮತ್ತು ಅನ್ನಪ್ರಸಾದವನ್ನು ಏರ್ಪಡಿಸಿರುತ್ತಾರೆ.

**ನವಲಿಹಾಳ**

ನವಲಿಹಾಳದ ಶಾಲೆಯ ಪಕ್ಕದ ಸರಕಾರಿ ಜಾಗದಲ್ಲಿ ಸಣ್ಣದೊಂದು ಗುಡಿಯಿದ್ದು, ಹಾಲಸಿದ್ಧನಾಥನ ಪಾದಗಳ ಚಿತ್ರವಿರುವ ಶಿಲ್ಪವನ್ನೇ ಜನರು ಪೂಜಿಸುತ್ತಾರೆ. ಅಲ್ಲಿ ಹಾಲಸಿದ್ಧನಾಥನ ಜಾತ್ರೆ ನಡೆಯುವುದಿಲ್ಲ. ಅದೇ ಮಾರ್ಗದಿಂದ ನಿಪ್ಪಾಣಿ ಕಡೆಗೆ ಹಾಲಸಿದ್ಧನಾಥರು ಬರುವ ಸಂದರ್ಭದಲ್ಲಿ ಒಂದು ದಿನ ರಾತ್ರಿ ಅಲ್ಲಿ ತಂಗಿದ್ದರ ಕುರುಹುಗಳೇ ಆ ಪಾದಗಳು ಎನ್ನುವುದು ಅಲ್ಲಿಯ ಜನರ ನಂಬಿಕೆಯಾಗಿದೆ.

**ಖಡಕಲಾಟ**

ಗ್ರಾಮದ ಯಲ್ಲಮ್ಮ ದೇವಸ್ಥಾನದ ಪಕ್ಕದಲ್ಲಿ ಒಂದು ಹಳೆಯ ಕಾಲದ ಹಾಲಸಿದ್ಧನಾಥನ ದೇವಸ್ಥಾನವಿದ್ದು, ಇತ್ತೀಚೆಗೆ ಊರಲ್ಲಿ ಮತ್ತೊಂದು ಹೊಸ ದೇವಸ್ಥಾನವನ್ನು ಹಾಲಸಿದ್ಧನಾಥನ ಹೆಸರಿನಲ್ಲಿ ಕಟ್ಟಲಾಗಿದೆ. ಹಳೆಯ ದೇವಸ್ಥಾನವು ಕುಂಬಾರ ಓಣೆಯಲ್ಲಿದ್ದು, ದೇವಸ್ಥಾನದ ಬದಿಗೆ ಮುಸ್ಲಿಂರ ಸಣ್ಣ ದರ್ಗಾ ಇದ್ದು, ಎರಡನ್ನು ಪೂಜೆ ಮಾಡುವುದರಿಂದ ಹಿಂದೂ–ಮುಸ್ಲಿಂ ಭಾವೈಕ್ಯತೆಯ ಸಂಕೇತದಂತೆ ಕಂಡು ಬರುತ್ತದೆ. ಹಳೆಯ ದೇವಸ್ಥಾನವಿದ್ದ ಜಾಗಕ್ಕೆ ಜಾತ್ರೆಯ ಸಂದರ್ಭದಲ್ಲಿ ಭಕ್ತಾದಿಗಳು ಕೆಲವೊಂದಿಷ್ಟು ಡೊಳ್ಳುಗಳ ವಾದ್ಯದೊಂದಿಗೆ ಪಲ್ಲಕ್ಕಿಯನ್ನು ಹೊತ್ತು ಸಾಗುತ್ತಾರೆ. ಈ ಜಾತ್ರೆಯು ಅಪ್ಪಾಚಿವಾಡಿಯ ಜಾತ್ರೆಯಾಗುವುದಕ್ಕಿಂತ ಒಂದು ವಾರ ಮುಂಚಿತವಾಗಿ ಖಡಕಲಾಟದಲ್ಲಿ ಜಾತ್ರೆಯು ನಡೆಯುತ್ತದೆ. ಅಂಬಲಿ ಮತ್ತು ಅನ್ನಪ್ರಸಾದವನ್ನು ಏರ್ಪಡಿಸಿರುತ್ತಾರೆ.

ಮನುಕುಲದ ಒಳಿತಿಗಾಗಿ ಬದುಕಿದ ಮಹಿಮರಲ್ಲಿ ಕರ್ನಾಟಕದ ಗಡಿಯಂಚಿನಲ್ಲಿ ಆಗಿ ಹೋದ ಶ್ರೀ ಹಾಲಸಿದ್ಧನಾಥರು ಗಮನಾರ್ಹರು. ಹಾಲಸಿದ್ಧನಾಥರನ್ನು ನಾಥ ಮತ್ತು ಸಿದ್ಧ ಎರಡು ಪಂಥದವರೆಂದು ತಿಳಿದು ಜನ ಆರಾಧಿಸುತ್ತಾರೆ. ಭಾವೈಕ್ಯತೆಯ ಹರಿಕಾರರಾಗಿದ್ದ ಸೂಫಿ ಸಂತರಂತೆ ಇವರು ಕೂಡಾ ಸರ್ವ ಜಾತಿ, ಜನಾಂಗದವರನ್ನು ಯಾವ ಭೇದ–ಭಾವಗಳಿಲ್ಲದೇ ಅಪ್ಪಿಕೊಂಡರು. ಹೀಗೆ ಹಾಲಸಿದ್ಧನಾಥರು ರಾಯಭಾಗ ತಾಲೂಕಿನ ಅಲಕನೂರು, ಕಂಕಣವಾಡಿ, ನಣದಿ, ನವಲಿಹಾಳ, ಪಟ್ಟಣಕುಡಿ ಮಾರ್ಗವಾಗಿ ನಿಪ್ಪಾಣಿಗೆ ಬಂದು ಅಲ್ಲಿ ಕೆಲವೊಂದಿಷ್ಟು ಕಾಲವಿದ್ದು, ನಂತರ ಅಲ್ಲಿಂದ ಕುರಲಿ ಮಾರ್ಗವಾಗಿ ಅಪ್ಪಾಚಿವಾಡಿಗೆ ಹೋಗಿ ಅಲ್ಲಿ ಜನರನ್ನು ಉದ್ಧರಿಸಿ ಜೀವಂತ ಸಮಾಧಿಯನ್ನು ತೆಗೆದುಕೊಳ್ಳುತ್ತಾರೆ.

**ಕೊನೆ ಟಿಪ್ಪಣಿಗಳು**

1. ಸೂರ್ಯನಾಥ ಕಾಮತ್. (18 ಸೆಪ್ಟೆಂಬರ್ 2012). ಕರ್ನಾಟಕದಲ್ಲಿ ನಾಥಪಂಥದ ಹಿನ್ನೆಲೆ. ಪ. ವಿಜಯ ಕರ್ನಾಟಕ, ಬೆಂಗಳೂರು.
2. ರಹಮತ್ ತರೀಕೆರೆ. (2013). *ಕರ್ನಾಟಕದ ನಾಥ ಪಂಥ.* ಅಭಿನವ ಪ್ರಕಾಶನ. ಬೆಂಗಳೂರು.
3. ಅದೇ.,
4. ಅದೇ.,

5. ರಾಜೇಂದ್ರ ಕಂಗಳೆ. (2002). ನಿಪ್ಪಾಣಿ ದರ್ಶನ (ಮರಾಠಿ). ಯಶವಂತರಾವ ಚವ್ಹಾಣ ಸಾಂಸ್ಕೃತಿಕ ಪ್ರತಿಷ್ಠಾನ, ನಿಪ್ಪಾಣಿ. ಪು.ಸಂ. 236.
6. ಅದೇ., ಪು.ಸಂ. 236.
7. ರಾಮರೆಡ್ಡಿ. (2015). ಶ್ರೀ ಹಾಲಸಿದ್ಧನಾಥ. ಹಾಲುಮತ ಸಮಾಜ ಬಾಂಧವರ ಸಮಿತಿ, ಅವರಾದಿ, ತಾ. ಗೋಕಾಕ, ಪು. ಸಂ. 04
8. ಮಧುರಾ ಧನಂಜಯ ಕರ್ವೆ. (21 ನವೆಂಬರ್ 2018). ಶ್ರೀ ಹಾಲಸಿದ್ಧನಾಥ ಜಾತ್ರೆ ಮತ್ತು ಭವಿಷ್ಯವಾಣಿಯ ವೈಜ್ಞಾನಿಕ ಸಂಶೋಧನೆ. ದೈನಿಕ ಸನಾತನ ಪ್ರಭಾತ, ಮಹರ್ಷಿ ಅಧ್ಯಾತ್ಮ ವಿಶ್ವವಿದ್ಯಾಲಯ, ಗೋವಾ.

**ವಕ್ತೃ ವಿವರ**

- ಅಪ್ಪಾಸಾಹೇಬ ಬ. ಪೂಜಾರಿ, 76 ವರ್ಷ, ಅರ್ಚಕರು
- ಚೈತನ್ಯನಾಥ ಮಹಾರಾಜರು, 35 ವರ್ಷ, ಸ್ವಾಮಿಜೀ, ಭಾಟನಾಗನೂರ
- ಮಾರುತಿ ಗಾವಡೆ, 24 ವರ್ಷ, ಉಪನ್ಯಾಸಕರು, ಖಡಕಲಾಟ
- ಶಂಕರ ಟಾಕಳೆ, 56 ವರ್ಷ, ಅರ್ಚಕರು, ಪಟ್ಟಣಕುಡಿ.
- ರೆವಣ್ಣಾ ಕೌಲಾಪುರೆ, 21 ವರ್ಷ, ವಿದ್ಯಾರ್ಥಿ, ನವಲಿಹಾಳ
- ಸಾಯಿಪ್ರಸಾದ ಖೋತ, 39 ವರ್ಷ, ವಕೀಲರು, ಹಂಡ್ಯಾನವಾಡಿ